ಕರ್ನಾಟಕ ಪರೀಕ್ಷಾ ಪ್ರಾಧಿಕಾರ
Karnataka Examinations Authority

ಸಂಖ್ಯೆ: ಇಡಿ/ಕೆಇಎ/ಪಿಜಿಆಯುಷ್/2023 ದಿನಾಂಕ: 20-11-2023

ಪ್ರಕಟಣೆ

**ಪಿಜಿ ಆಯುಷ್ ಕೋರ್ಸುಗಳಿಗೆ 2023ನೇ ಸಾಲಿಗೆ AIAPGET-2023 ಕನಿಷ್ಠ ಅರ್ಹತೆಯ ಅಂಕಗಳನ್ನು ಪರಿಷ್ಕರಿಸಿರುವ ಹಿನ್ನಲೆಯಲ್ಲಿ ನೊಂದಣಿ, ದಾಖಲಾತಿ ಪರಿಶೀಲನೆ**

NCISM, New Delhi ರವರ ದಿನಾಂಕ 10-11-2023 ರ ಸೂಚನೆಯಲ್ಲಿ 2023ನೇ ಸಾಲಿನ ಪಿಜಿ ಆಯುಷ್ ಕೋರ್ಸುಗಳ ಪ್ರವೇಶಕ್ಕಾಗಿ ಎಲ್ಲಾ ವರ್ಗದ ಅಭ್ಯರ್ಥಿಗಳಿಗೆ **AIAPGET-2023** ಕನಿಷ್ಠ ಅರ್ಹತೆಯ 5 ಪರ್ಸೆಂಟೈಲ್ ಕಡಿಮೆ ಮಾಡಿರುವುದಾಗಿ ತಮ್ಮ ವೆಬ್‌ಸೈಟಿನಲ್ಲಿ notice ಪ್ರಕಟಿಸಿರುತ್ತಾರೆ.

*2023ನೇ ಸಾಲಿನ ಪಿಜಿ ಆಯುಷ್ ಕೋರ್ಸುಗಳ ಪ್ರವೇಶಕ್ಕಾಗಿ ಕನಿಷ್ಠ ಅರ್ಹತೆಯ ಅಂಕಗಳನ್ನು ಪರಿಷ್ಕರಿಸಿದ ಹಿನ್ನಲೆಯಲ್ಲಿ, ಆನ್‌ಲೈನ್ ನೊಂದಣಿ, ಅರ್ಜಿ ಸಲ್ಲಿಸಲು ಹಾಗು ಶುಲ್ಕ ಪಾವತಿಸಲು ಪ್ರಾಧಿಕಾರದ ಪೋರ್ಟಲ್ ಅನ್ನು ತೆರೆಯಲಾಗಿದೆ. ಅರ್ಹಗೊಳ್ಳುವ ಆಯುಷ್ ಅಭ್ಯರ್ಥಿಗಳು ಸೇವಾ ನಿರತ ಅಭ್ಯರ್ಥಿಗಳೂ ಸೇರಿದಂತೆ ದಿನಾಂಕ **20-11-2023** ರ ರಾ. **8.00** ರಿಂದ **23-11-2023** ರ ರಾತ್ರಿ 11.59 ರವರೆಗೆ ಆನ್‌ಲೈನ್ ನೊಂದಣಿ ಮಾಡಿ ಅರ್ಜಿ ಸಲ್ಲಿಸಿ ನಿಗದಿತ ಶುಲ್ಕವನ್ನು ಪಾವತಿಸಬಹುದಾಗಿದೆ ಹಾಗು ಎರಡನೇ ಸುತ್ತಿನಲ್ಲಿ ಲಭ್ಯವಾಗುವ ಸೀಟುಗಳ ಹಂಚಿಕೆಯಲ್ಲಿ ಇತರೆ ಅಭ್ಯರ್ಥಿಗಳ ಜೊತೆಯಲ್ಲಿ ಭಾಗವಹಿಸಲು ಅರ್ಹತೆ ಪಡೆಯಬಹುದಾಗಿದೆ.*

ಇಲ್ಲಿಯವರೆಗೆ ನೊಂದಣಿ ಮಾಡದಿರುವ ***ಪಿಜಿ ಆಯುಷ್*** ಅರ್ಹ ಅಭ್ಯರ್ಥಿಗಳೂ ಸಹ ನೊಂದಣಿ ಮಾಡಿ ಅರ್ಜಿ ಸಲ್ಲಿಸುವ ಪ್ರಕ್ರಿಯೆಯನ್ನು ಪೂರ್ಣಗೊಳಿಸಬಹುದಾಗಿದೆ. ಪಿಜಿ ಆಯುಷ್ ಮಾಹಿತಿ ಪುಸ್ತಕದಲ್ಲಿ ನೀಡಿರುವ ಶೈಕ್ಷಣಿಕ ವಿದ್ಯಾರ್ಹತೆಗಳನ್ನು ಹಾಗು ಇತರೆ ಮಾನದಂಡಗಳನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ನಲ್ಲಿ ಪ್ರಚುರ ಪಡಿಸಲಾಗಿದೆ.

ಈ ಮೇಲಿನ ದಿನಾಂಕಗಳಂದು ನೊಂದಣಿ ಮಾಡಿ ಶುಲ್ಕವನ್ನು ಪಾವತಿಸುವ ***ಪಿಜಿ ಆಯುಷ್*** ಅಭ್ಯರ್ಥಿಗಳು ಮೂಲ ದಾಖಲೆಗಳ ಪರಿಶೀಲನೆಗಾಗಿ ದಿನಾಂಕ **24-11-2023** ರಂದು ಕೆಇಎ, ಬೆಂಗಳೂರು ಇಲ್ಲಿ ಎಲ್ಲಾ ಅವಶ್ಯ ಮೂಲ ದಾಖಲೆಗಳು ಮತ್ತು ಎರಡು ಸೆಟ್ ಜೆರಾಕ್ಸ್ ಪ್ರತಿಗಳೊಂದಿಗೆ ಹಾಜರಾಗಬೇಕು ವರದಿ ಮಾಡಿಕೊಳ್ಳುವುದು.

ಕನಿಷ್ಠ ಅರ್ಹತೆಯ ಅಂಕಗಳನ್ನು ಪರಿಷ್ಕರಿಸಿದ್ದರಿಂದ ಅರ್ಹತೆ ಪಡೆಯುವ ***ಪಿಜಿ ಆಯುಷ್*** ಅಂಗವಿಕಲ ಅಭ್ಯರ್ಥಿಗಳೂ ಸಹ ದಿನಾಂಕ **24-11-2023** ರಂದು ಬೆಳಿಗ್ಗೆ 11.00 ವೈದ್ಯಕೀಯ ಪರಿಶೀಲನೆಗೆ ಕೆಇಎ, ಬೆಂಗಳೂರು ಇಲ್ಲಿ ವೈದ್ಯಕೀಯ ಪ್ರಮಾಣ ಪತ್ರಗಳು ಮತ್ತು ಗುರುತಿನ ಚೀಟಿಯೊಂದಿಗೆ ಹಾಜರಾಗಬೇಕು.

ಮಾರ್ಪಡಿಸಿದ ಎರಡನೇ ಸುತ್ತಿನ ಸೀಟು ಹಂಚಿಕೆಯ ವೇಳಾಪಟ್ಟಿಯನ್ನು ಸದ್ಯದಲ್ಲಿಯೇ ಪ್ರಕಟಿಸಲಾಗುವುದು.

**ಗಮನಿಸಿ:**

1. ಅಭ್ಯರ್ಥಿ ತಮ್ಮ ರ್‍ಯಾಂಕ್ ಸರದಿಯ ನಂತರ ಉದ್ಭವಿಸುವ ಸೀಟುಗಳನ್ನು ಪಡೆಯಲು ಹಕ್ಕನ್ನು ಚಲಾಯಿಸುವಂತಿಲ್ಲ.
2. ಮುಂದಿನ ಯಾವುದೇ ಸುತ್ತಿನ ಸೀಟು ಹಂಚಿಕೆಗೆ ಆನ್‌ಲೈನ್ ನೊಂದಣಿ ಮಾಡಿಕೊಳ್ಳಲು / ಅರ್ಜಿ ಸಲ್ಲಿಸಲು ಅವಕಾಶಗಳನ್ನು ನೀಡಲಾಗುವುದಿಲ್ಲ.

ಸಹಿ/-ಕಾರ್ಯನಿರ್ವಾಹಕ ನಿರ್ದೇಶಕರು

**18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012**
18th Cross, Sampige Road, Malleshwaram, Bengaluru - 560 012.
Phone: 080 - 23 564 583, 23 460 460, 23 361 786, Fax: 080 - 23 461 576
e-mail : keauthority-ka@nic.in Website : http://kea.kar.nic.in